
## ಮಕ್ಕಳ ಕವಿತೆ

ಪ್ರಭುರಾಜ ಅರಣಕಲ್
ಕಲೆ: ಪ್ರವೀಣ್ ಆಚಾರ್ಯ




# ಸುಬ್ಬಾ ಭಟ್ರು

ಸ್ಕೂಟರ್ ಮೇಲೆ ಸುಬ್ಬಾಭಟ್ರು
ಹಬ್ಬದೂಟಕ್ಕೆ ಬಂದ್ಬಿಟ್ರು
ಮಂತ್ರಾ ಹೇಳ್ತಾ ಅಭಿಷೇಕ್ ಮಾಡಿ
ಹೋಳಿಗಿ ಊಟ ಉಂಡ್ಬಿಟ್ರು

ಉಂಡಾದ್ಮೇಲೆ ಕೈ ತೋಳಕೊಂಡ್ರು
ಹೊಟ್ಟೆ ತುಂಬ್ತು ಅಂದ್ಬಿಟ್ರು
ತಾಂಬೂಲ್ ಜಗಿಯುತ ದಕ್ಷಿಣೆ ಪಡೆದು
ಬರುವೆನು ಅಂದು ಹೊರಟ್ಬಿಟ್ರು

ಅವಸರದಲ್ಲಿ ಡೇಗುತ ಹೊರಗೆ
ಧಾವಿಸಿದರು ಸುಬ್ಬಾಭಟ್ರು
ಸ್ಕೊಟರ್ ಚಾಲೂ ಆಗ್ಲೇಯಿಲ್ಲ
ಸದ್ದೊರ ಬಂತು ಟುರ್ ಟುರ್ ಟುರ್..